## ಲಾಕ್‌ಡೌನ್‌ನಲ್ಲಿ ಅರಳಿದ ಕಲೆ

ಬೆಂಗಳೂರಿನಲ್ಲಿ ಉದ್ಯೋಗಿಯಾಗಿರುವ ಮಧುರಾ ಲಾಕ್‌ಡೌನ್ ಸಮಯದಲ್ಲಿ ಬಾಳಹೊನ್ನೂರಿನ ತಮ್ಮ ಮನೆಗೆ ಬಂದರು. ತಮ್ಮ ಬಿಡುವಿನ ಸಮಯದಲ್ಲಿ ದಿನಪತ್ರಿಕೆಯಲ್ಲಿ ವಿವಿಧ ಕಲಾಕೃತಿಗಳನ್ನು ರಚಿಸಿದ್ದಾರೆ. ಗೋಡೆ ಅಲಂಕಾರಿಕ ಕಲಾಕೃತಿ, ಬೆಸ್ಟ್ ಔಟ್ ಆಫ್ ವೆಸ್ಟ್ ಕ್ರಾಫ್ಟ್, ವಿಂಡ್ ಚೈನ್, ಡ್ರಿಮ್ ಕ್ಯಾಚರ್, ಲವ್ ಬರ್ಡ್ಸ್, ಎತ್ತಿನಗಾಡಿ ಹೀಗೆ ಹಲವು ಬಗೆಯ ಕಲಾಕೃತಿಗಳನ್ನು ರದ್ದಿ ಪೇಪರಿನಲ್ಲಿಯೇ ರಚಿಸಿದ್ದಾರೆ.

—ಪ್ರಭಾ ಪಿ. ಶಾಸ್ತ್ರಿ ಶಿವಮೊಗ್ಗ





## ಕಲೆಯಾಗಿ ಅರಳಿತು ಶಿಲೆ

ಕಾಡ ಕಗ್ಗಲ್ಲಿನಿಂದ ಸುಂದರವಾದ ಮೂರ್ತಿಯನ್ನು ಕೆತ್ತಬಹುದು. ಹಾಗೇ ಮೃದುವಾದ ಮೇಣದ ಕಲ್ಲು, ಬಳಪದ ಕಲ್ಲು, ಅಮೃತ ಶಿಲೆಯಿಂದಲೂ ಸುಂದರವಾದ ಮೂರ್ತಿಯನ್ನು ಕೆತ್ತುವುದಕ್ಕೆ ಸಾಧ್ಯವಿದೆ. ಇಲ್ಲಿ ಹಲವಾರು ಕಲ್ಲುಗಳನ್ನು ಅಂದರೆ ಬಳಪದ ಕಲ್ಲು, ಕಪ್ಪು ಶಿಲೆ – ಹೀಗೆ ಬೇರೆ ಬೇರೆ ಗುಣದ ಕಲ್ಲಗಳನ್ನು ಆಯ್ಕೆ ಮಾಡಿಕೊಂಡು ಬುದ್ಧ, ಆನೆ, ಆಮೆ, ಲಿಂಗ, ಗಣಪತಿ, ತೇರು ಸೇರಿದಂತೆ ಭಿನ್ನ ಭಿನ್ನ ಆಕೃತಿಗಳನ್ನು ಕೆತ್ತಲಾಗಿದೆ. ಹೀಗೆ ವಿವಿಧ ಶಿಲೆಗಳನ್ನು ಅತ್ಯದ್ಭುತವಾಗಿ ಕೆತ್ತನೆ ಮಾಡಿ ಕಲೆಯಲ್ಲಿ ತಮ್ಮ ನೆಲೆಯನ್ನು ಕಲಾವಿದರು ಕಂಡುಕೊಳ್ಳುತ್ತಿದ್ದಾರೆ. ಇಂತಹ ಮನಮೋಹಕ ಕೆತ್ತನೆಗಳು ಕಂಡದ್ದು ಹಂಪಿಯಲ್ಲಿ.

—ಯಶಸ್ವಿ ದೇವಾಡಿಗ, ವಿಜಯಪುರ

## ಪರೋಟಾ ಮಾಸ್ಕ್

ಬೆಳಗಾವಿ ದಾಟಿದ ಮೇಲೆ ಕೋಲ್ಹಾಪುರಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿ ಎನ್.ಎಚ್. 4 ಮಗ್ಗಲಲ್ಲಿರುವ ರೆಸ್ಟೋರೆಂಟ್ ಒಂದರಲ್ಲಿ ಪರೋಟಾ ಮಾಸ್ಕ್ ಮಾಡಿ ಊಟಕ್ಕೆ ಕೊಡುವರು. ಇದು ನೋಡಲು ತ್ರೀ ಲೇಯರ್ಡ್ ಸರ್ಜಿಕಲ್ ಮಾಸ್ಕ್ ಪ್ರತಿರೂಪದಂತೆ ಕಾಣುವುದು. ಈ ಮೂಲಕ ಮಾಸ್ಕ್ ಪ್ರಚಾರ ಮಾಡುವುದು. ಮಾಸ್ಕ್ ಬಗ್ಗೆ ಜನಜಾಗೃತಿ ಉಂಟು ಮಾಡುವ ಉದ್ದೇಶ ಇದರ ಹಿಂದಿದೆ. ಇಂಥ ಮಾಸ್ಕ್‌ಗಳನ್ನು ಮಧುರೈ ರೆಸ್ಟೋರೆಂಟ್‌ನಲ್ಲಿ ಕೊಡುವುದನ್ನು ಕೇಳಿದ್ದೆ. ನಮ್ಮಲ್ಲೂ ಸಿಗುವುದನ್ನು ನೋಡಿ ಖುಷಿಯಾಯಿತು.

—ಕರವೀರಪ್ರಭು ಕ್ಯಾಲಕೊಂಡ, ಬಾದಾಮಿ

